154 ನೆ ಪ್ರ ನಿ-330
65
03/11/25

# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ- 330ರಡಿ ಮಂಡಿಸಿರುವ ಸೂಚನೆಗೆ ಉತ್ತರ.

**ವಿಷಯ:-**

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 14,980 ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ. ಈ ಹುದ್ದೆಗೆ ವಿದ್ಯಾರ್ಹತೆ ನಿಗಧಿಪಡಿಸದೆ ಇರುವುದಕ್ಕೆ ಕಾರಣ ಮತ್ತು ಈ ನೇಮಕಾತಿಯಲ್ಲಿ ಗ್ರಾಮೀಣ ಮೀಸಲಾತಿಯಡಿ ನೇಮಕಗೊಂಡ ಸಿಬ್ಬಂದಿಗಳು ಯಾವ ಪ್ರಮಾಣ ಪತ್ರವನ್ನು ಹಾಜರಿಪಡಿಸಿರುತ್ತಾರೆ. ವಿದ್ಯಾರ್ಹತೆಯನ್ನು ನಿಗಧಿಪಡಿಸದಲೆ ಗ್ರಾಮೀಣ ಮೀಸಲಾತಿ ಹುದ್ದೆಗಳನ್ನು ಭರ್ತಿ ಮಾಡಿದ ಕ್ರಮದ ವಿವರ ಇದರ ಸಂಬಂಧ ಬಂದ ಆಕ್ಷೇಪಣೆಗಳಿಗೆ ನೀಡಿದ ಉತ್ತರದವರ ಪ್ರತಿಗಳೊಂದಿಗೆ ಸ್ಪಷ್ಟೀಕರಣಗಳೊಂದಿಗೆ ಈ ವಿಶೇಷ ನೇಮಕಾತಿ ನಿಯಮಗಳ ಬಗ್ಗೆ.

**ಉತ್ತರ :**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ Bruhat Bengaluru Mahanagara Palike (General Cadre & Recruitment of Officers and Employee) Rules, 2020 ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು, 2022 ಗಳಲ್ಲಿ ಪೌರಕಾರ್ಮಿಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ (1) ಕನ್ನಡ ಭಾಷೆ ಮಾತನಾಡಲು ತಿಳಿದಿರಬೇಕು (2) ದೈಹಿಕ ದೃಢತೆಯು ಇರತಕ್ಕದ್ದು (ಸರ್ಕಾರಿ ಆಸ್ಪತ್ರೆಯ ಸಕ್ಷಮ ಪ್ರಾಧಿಕಾರದಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು) ಎಂದು ಅರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ತ್ಯಾಜ್ಯ ನಿರ್ವಹಣೆಯ ಕೆಲಸ ಕಾರ್ಯಗಳಲ್ಲಿ ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ 3,673 ಪೌರಕಾರ್ಮಿಕರನ್ನು ವಿಶೇಷ ನೇರ ನೇಮಕಾತಿಯಡಿ ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ಅಧಿಸೂಚನೆ ಸಂಖ್ಯೆ: ನಅಇ 165 ಬಿಬಿಎಲ್ 2022, ದಿನಾಂಕ:23-11-2022 ರಂದು ಅಧಿಸೂಚನೆ ಹೊರಡಿಸಲಾಗಿದೆ. ಮುಂದುವರೆದು, ನೇರಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಭರ್ತಿಗಾಗಿ 11,307 ಸಂಖ್ಯಾತಿರಿಕ್ತ ಪೌರಕಾರ್ಮಿಕ ಹುದ್ದೆಗಳನ್ನು ಸೃಜಿಸಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ನಅಇ 165 ಬಿಬಿಎಲ್ 2022(ಇ), ದಿನಾಂಕ: 02-03-2023 ಹಾಗೂ ಸೇರ್ಪಡೆ ಆದೇಶ ಸಂಖ್ಯೆ: ನಅಇ 165 ಬಿಬಿಎಲ್ 2022(ಭಾ-1), ದಿನಾಂಕ: 28-03-2023 ಮತ್ತು 04-03-2024 ಗಳಂತೆ ಆದೇಶ ಹೊರಡಿಸಲಾಗಿರುತ್ತದೆ.
- 3,673ರ ಪೌರಕಾರ್ಮಿಕರನ್ನು ಭರ್ತಿ ಮಾಡುವಲ್ಲಿ ಒಟ್ಟು 924 ಸಂಖ್ಯೆಯ ಹುದ್ದೆಗಳನ್ನು ಗ್ರಾಮೀಣ ವರ್ಗಕ್ಕೆ ಮೀಸಲು ಇರಿಸಲಾಗಿದ್ದು, ಅರ್ಹ 130 ಅಭ್ಯರ್ಥಿಗಳನ್ನು ಪರಿಗಣಿಸಲಾಗಿದೆ. ಉಳಿದ 794 ಹುದ್ದೆಗಳು ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಖಾಲಿ ಉಳಿದಿರುತ್ತವೆ.
- 11,307 ಸಂಖ್ಯಾತರಿಕ್ತ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ:28-03-2023 ರ ಸೇರ್ಪಡೆ ಆದೇಶದಲ್ಲಿ 'ಗ್ರಾಮೀಣ ಮೀಸಲು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಈ ಮೀಸಲಾದ ಹುದ್ದೆಗಳಿಗೆ ಉಳಿದ ಅರ್ಹ ಅಭ್ಯರ್ಥಿಗಳನ್ನು ಪರಿಗಣಿಸುವುದು' ಎಂದು ಆದೇಶಿಸಲಾಗಿದೆ. ಈ ನೇಮಕಾತಿಯಲ್ಲಿ 13 ಅರ್ಹ ಗ್ರಾಮೀಣ ಅಭ್ಯರ್ಥಿಗಳನ್ನು ಪರಿಗಣಿಸಲಾಗಿದೆ.

**ಸಂಖ್ಯೆ: ನಅಇ 195 ಬಿಬಿಎಲ್ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ